ದಿನಾಂಕ **:** 13.07.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿಯ ಪರವಾಗಿ ಶ್ರೀ ಎನ್.ವಿ.ಜೆ. ವಕೀಲರಿಂದಃ**

ವಾದಿಯವರು ನನ್ನ ತಾಯಿ. ಅವರಿಗೆ ಈಗ ಮನೆ ಕೆಲಸವನ್ನು ಮಾಡಲು ಆಗುತ್ತಿಲ್ಲ. ನನ್ನ ತಾಯಿಯವರಿಗೆ ಈಗ **65** ವರ್ಷ ವಯಸ್ಸಾಗಿದ್ದು ಆರೋಗ್ಯವಾಗಿ ಓಡಾಡಿಕೊಂಡು ಇದ್ದಾರೆಂದರೆ ಸರಿಯಲ್ಲ. ಅವರಿಗೆ ಆರೋಗ್ಯ ಸರಿ ಇಲ್ಲ ಎಂಬ ಬಗ್ಗೆ ದಾಖಲಾತಿಯನ್ನು ನೀಡಿರುತ್ತೇನೆ. ನಮ್ಮ ಊರು ಮೊದಲು ಹೊಗಳೆಗೆರೆ ಗ್ರೂಪ್ ಪಂಚಾಯಿತಿಗೆ ಸೇರಿತ್ತು ಎಂದರೆ ಸರಿ. ನಂತರ ನಮ್ಮ ಊರು ಯಲ್ದೂರು ಮಂಡಲ ಪಂಚಾಯಿತಿಗೆ ವರ್ಗವಣೆಯಾಯಿತು ಎಂದರೆ ಸರಿ. ನಂತರ ಸದರಿ ಮಂಡಲ ಪಂಚಾಯಿತಿ ಪಂಚಾಯಿತಿಯಾಗಿ ಪರಿವರ್ತನೆ ಮಾಡಲಾಯಿತು ಎಂದರೆ ಸರಿ.

ದಾವೆಯನ್ನು ನನ್ನ ತಾಯಿಯವರು ಖಾತೆ ನಂ.**7/3** ರ ಮನೆಗೆ ಮತ್ತು ಹಿಂದಿನ ವಠಾರದ ಜಾಗದ ಖಾತೆ ನಂ.**10/2** ಕ್ಕೆ ಈ ದಾವೆ ಸಲ್ಲಿಸಲಾಗಿದೆ. ಸದರಿ ಆಸ್ತಿಗಳು ಗ್ರಾಮಠಾಣಾದಲ್ಲಿ ಇವೆ. ನಮ್ಮ ಊರಿನಲ್ಲಿ **5** ರಿಂದ **6** ಮುಸ್ಲೀಮ್ ಜನಾಂಗದ ಮನೆಗಳು ಇವೆ. ಅವರು ಈಗಲೂ ಸಹ ಇದ್ದಾರೆ. ಕಾನೇಷುಮಾರಿ ನಂ.**7** ಹೊಗಳೆಗೆರೆ ಗ್ರೂಪ್ ಪಂಚಾಯಿತಿಗೆ ಸೇರಿದ್ದಾಗ ಯಾಕುಬ್ ಸಾಬಿರವರ ಹೆಸರಿನಲ್ಲಿತ್ತು. ಅವರಿಗೆ ಸದರಿ ಆಸ್ತಿಯು ಹೇಗೆ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ಆದರೆ ಅವರು ಕೊಟ್ಟಿರುವ ಪತ್ರ ನಮ್ಮ ಬಳಿ ಇದೆ. ಸದರಿ ಪತ್ರ ವಾದಿಯವರ ಹೆಸರಿನಲ್ಲಿದೆ. ಹಳೇ ಕಾನೇಷುಮಾರಿ ನಂ.**7** ಮತ್ತು ಅದರ ಹೊಸ ನಂಬರ್ **10** ಯಲ್ದೂರು ಮಂಡಲ ಪಂಚಾಯಿತಿಗೆ ಬಂದಾಗ ನನ್ನ ತಾಯಿಯ ಹೆಸರಿನಲ್ಲಿತ್ತು. ಕಾನೇಷುಮಾರಿ ನಂ.**7** ಈಗ ಹಲವಾರು ವಿಭಾಗಗಳಾಗಿದೆ ಅದಕ್ಕೂ ಮೊದಲು ಕಾನೇಷುಮಾರಿ ನಂ.**7** ಇದ್ದಾಗ ಅದು ನನ್ನ ತಾಯಿಯ ಹೆಸರಿನಲ್ಲಿತು. ಕಾನೇಷುಮಾರಿ ನಂ.**7** ರ ಒಟ್ಟು ವಿಸ್ತೀರ್ಣ **29** ಇಂಟು **33** ಅಡಿ ಇತ್ತು. ಸದರಿ ಆಸ್ತಿಯು ಮೊದಲಿಗೆ

ವಾದಿಯವರ ಹೆಸರಿನಲ್ಲಿತ್ತು. ಕಾನೇಷುಮಾರಿ ನಂ.**7** ಈಗ **1, 2, 3** ಎಂದು ವಿಭಾಗಗಳಾಗಿದೆ. ಕಾನೇಷುಮಾರಿ ನಂ.**7/1** ರ ಆಸ್ತಿಯಲ್ಲಿ ನನ್ನ ಚಿಕ್ಕಪ್ಪ ಕೆ.ವಿ. ನಾಗರಾಜ್ ರವರು ಇದ್ದಾರೆ. ಕಾನೇಷುಮಾರಿ ನಂ.**7/2** ರಲ್ಲಿ ಯಾರು ಇದ್ದಾರೆ ಎಂದು ನನಗೆ ನೆನಪಿಗೆ ಬರುತ್ತಿಲ್ಲ. ಕಾನೇಷುಮಾರಿ ನಂ.**7/3** ರಲ್ಲಿ ನನ್ನ ತಾಯಿಯವರು ಅಂದರೆ ವಾದಿ ಮನೆ ಹೊಂದಿ ವಾಸವಿದ್ದಾರೆ. ಕಾನೇಷುಮಾರಿ ನಂ.**7/1, 7/2** ರ ವಿಸ್ತೀರ್ಣ ಮತ್ತು ಚೆಕ್ಕುಬಂದಿ ನನಗೆ ನೆನಪಿಲ್ಲ. ಕಾನೇಷುಮಾರಿ ನಂ.**7/3** ರ ಪೂ: ದಾರಿ, ಪ : ಕೆ.ವಿ.ನಾಗರಾಜ್ ರವರ ವಠಾರ, ಉ : ದಾರಿ ಮತ್ತು ದ : ದೋಬಿ ನಾರೆಮ್ಮನ ಜಾಗವಿದೆ. ಸದರಿ ದೋಬಿ ನಾರೆಮ್ಮನ ವಾರಸುದಾರರೇ ಈ ಕೇಸಿನ ಪ್ರತಿವಾದಿ ಎಂದರೆ ಸರಿ. ಕಾನೇಷುಮಾರಿ ನಂ.**7** ನ್ನು ಯಾವ ಆಧಾರದ ಮೇಲೆ **7/1, 2, 3** ಎಂದು ವಿಭಾಗ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಕಾನೇಷುಮಾರಿ ನಂ.**7/1, 7/2** ಮತ್ತು **7/3** ರ ದಾಖಲಾತಿಗಳನ್ನು ನಾನು ನೋಡಿರುತ್ತೇನೆ. ಕಾನೇಷುಮಾರಿ ನಂ.**7/1** ರಲ್ಲಿ ನಮ್ಮ ಚಿಕ್ಕಪ್ಪನವರು ಎಷ್ಟು ವಿಸ್ತೀರ್ಣದ ಆಸ್ತಿಯಲ್ಲಿ ಸ್ವಾಧೀನ ಹೊಂದಿದ್ದಾರೆಂದು ಹೇಳಲು ಆಗುವುದಿಲ್ಲ. ಕಾನೇಷುಮಾರಿ ನಂ.**7/1, 7/2, 7/3** ರ ಒಟ್ಟು ವಿಸ್ತೀರ್ಣ ಎಷ್ಟು ನನಗೆ ನೆನಪಿಲ್ಲ. ಸದರಿ ಕಾನೇಷುಮಾರಿ ನಂ.**7/1, 7/2, 7/3** ರ ಒಟ್ಟು ಅಸ್ತಿಯ ಪೂ: ದಾರಿ, ಪ : ಕೆ.ವಿ. ನಾಗರಾಜು ಮತ್ತು ಪ್ರತಿವಾದಿಯ ವಠಾರ, ಉ : ದಾರಿ ಮತ್ತು ಲಕ್ಷ್ಮಮ್ಮನ ವಠಾರ ಮತ್ತು ದ : ಎಲ್. ಮುನಿಶಾಮಿರವರ ಆಸ್ತಿ.

**1983.84** ರಲ್ಲಿ ನನ್ನ ತಾಯಿ ಅಸ್ತಿಯನ್ನು ಕೊಂಡುಕೊಂಡಿರುತ್ತಾರೆ. ಯಾಶೋದ್ ಸಾಬಿಯವರಿಂದ ಸದರಿ ಆಸ್ತಿಯನ್ನು ನನ್ನ ತಾಯಿ ಕೊಂಡುಕೊಂಡಿರುತ್ತಾರೆ. ಆ ರೀತಿ ಆಸ್ತಿ ಕೊಂಡುಕೊಳ್ಳುವಾಗ ಅವರ ಮೂಲದಾಖಲಾತಿಗಳನ್ನು ಪಡೆದುಕೊಂಡಿದ್ದಾರೆ. ಯಾಶೋದ್

ಸಾಬಿರವರಿಗೆ ಸದರಿ ಆಸ್ತಿ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಆಸ್ತಿಯು ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ನೆನಪಿಲ್ಲ. ಸದರಿ ದಾಖಲಾತಿಗಳನ್ನು ಪಡೆದುಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ. ನಮ್ಮ ತಾಯಿ ಕಾನೇಷುಮಾರಿ ನಂ.7 ರಲ್ಲಿ ಆಸ್ತಿ ಕೊಂಡುಕೊಳ್ಳುವಾಗ 16 ಇಂಟು 18 ಅಡಿಯ ಮನೆ ಮತ್ತು 13 ಇಂಟು 15 ರ ಖಾಲಿ ಜಾಗವನ್ನು ಕೊಂಡುಕೊಂಡಿರುತ್ತಾರೆ. ಸದರಿ 2 ಆಸ್ತಿಗೆ ಬೇರೆ ಬೇರೆ ಚೆಕ್ಕುಬಂದಿ ಇದೆ. ಮನೆಯ ಚೆಕ್ಕುಬಂದಿ ಪೂ: ದಾರಿ, ಪ : ಕೆ.ವಿ. ನಾಗರಾಜುರವರ ವಠಾರ, ಉ : ದಾರಿ ಮತ್ತು ದ : ಪ್ರತಿವಾದಿಯವರ ಆಸ್ತಿ. ಸದರಿ ಮನೆ 6 ಅಂಕಣದಲ್ಲಿ ಇದೆ. ಒಂದು ಅಂಕಣ 6 ಅಡಿ. ಅಂಕಣಕ್ಕೂ ಕಿರುಅಂಕಣಕ್ಕೂ ಏನು ವ್ಯತ್ಯಾಸ ಎಂದು ನನಗೆ ಗೊತ್ತಿಲ್ಲ. ಪಶ್ಚಿಮಕ್ಕೆ ಇರುವ ನಮ್ಮ ಚಿಕ್ಕಪ್ಪನ ಆಸ್ತಿಯು ಕಾನೇಷುಮಾರಿ ನಂ.7 ಕ್ಕೆ ಸಂಬಂಧಪಟ್ಟಿದೆ. ಸದರಿ ಆಸ್ತಿಯನ್ನು ನನ್ನ ಚಿಕ್ಕಪ್ಪನವರು ಯಶೋದ್ ಸಾಬಿಯವರ ತಮ್ಮ ಕಾಸೀಮ್ ಸಾಬಿಯವರಿಂದ ಕೊಂಡುಕೊಂಡಿರುತ್ತಾರೆ. ಅವರು ಎಷ್ಟು ವಿಸ್ತೀರ್ಣದ ಆಸ್ತಿಯನ್ನು ಕೊಂಡುಕೊಂಡಿದ್ದಾರೆಂದು ನನಗೆ ನೆನಪಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು).**

ಓದಿ ಹೇಳಿ ಕೇಳಿ ಸರಿಯಾಗಿದೆ.

(ಮನು ಬಿ.ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಶ್ರೀನಿವಾಸಪುರ